# ಭಾರತ-ಆಸ್ಟ್ರೇಲಿಯಾದ 6ನೇ ನೌಕಾ ಭದ್ರತೆ ಮಾತುಕತೆ

ಆಗಸ್ಟ್ 13, 2024

ಭಾರತ-ಆಸ್ಟ್ರೇಲಿಯಾದ 6ನೇ ನೌಕಾ ಭದ್ರತಾ ಮಾತುಕತೆ 2024ರ ಆಗಸ್ಟ್ 13ರಂದು ಕ್ಯಾನ್‌ಬೆರಾದಲ್ಲಿ ನಡೆಯಿತು. ವಿದೇಶಾಂಗ ಸಚಿವಾಲಯದ ನಿಶ್ಶಸ್ತ್ರೀಕರಣ ಮತ್ತು ಅಂತಾರಾಷ್ಟ್ರೀಯ ಭದ್ರತೆ ವ್ಯವಹಾರಗಳ ಜಂಟಿ ಕಾರ್ಯದರ್ಶಿ ಶ್ರೀ ಮುವಾನ್ಪುಯಿ ಸಯಾವಿ ಅವರು ಭಾರತದ ನಿಯೋಗದ ನೇತೃತ್ವ ವಹಿಸಿದರೆ, ಆಸ್ಟ್ರೇಲಿಯಾದ ವಿದೇಶಾಂಗ ವ್ಯವಹಾರಗಳು ಮತ್ತು ವ್ಯಾಪಾರ ಇಲಾಖೆಯ ದಕ್ಷಿಣ ಏಷ್ಯಾ ಮತ್ತು ಕೇಂದ್ರ ಏಷ್ಯಾ ವಿಭಾಗದ ಪ್ರಥಮ ಸಹಾಯಕ ಕಾರ್ಯದರ್ಶಿ ಶ್ರೀ ಸಾರಾ ಸ್ಟೋರೆ ಮತ್ತು ರಕ್ಷಣಾ ಇಲಾಖೆಯ ಅಂತಾರಾಷ್ಟ್ರೀಯ ನೀತಿ ವಿಭಾಗದ ಪ್ರಥಮ ಸಹಾಯಕ ಕಾರ್ಯದರ್ಶಿ ಶ್ರೀ ಬರ್ನಾರ್ಡ್ ಫಿಲಿಪ್ ಅವರು ಆಸ್ಟ್ರೇಲಿಯಾ ನಿಯೋಗದ ನೇತೃತ್ವ ವಹಿಸಿದ್ದರು.

2. ಎಲ್ಲರನ್ನೊಳಗೊಂಡ ಬೆಳವಣಿಗೆ ಮತ್ತು ಜಾಗತಿಕ ಯೋಗಕ್ಷೇಮಕ್ಕೆ ಅನುವಾಗುವಂಥ ಸುರಕ್ಷಿತ ಮತ್ತು ಭದ್ರ ನೌಕಾ ಪರಿಸರವನ್ನು ಉಳಿಸಿಕೊಳ್ಳುವ ಮಾರ್ಗಗಳ ಬಗ್ಗೆ ಎರಡೂ ಕಡೆಯವರು ಚರ್ಚಿಸಿದರು. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಕಡಲ ಭದ್ರತೆಯ ಪರಿಸರ, ನೌಕಾ ಡೊಮೈನ್ ಜಾಗೃತಿ, ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (ಎಚ್‌ಎಡಿಆರ್) ಸಮನ್ವಯತೆ, ಪ್ರಾದೇಶಿಕ ಮತ್ತು ಬಹುಪಕ್ಷೀಯ ತೊಡಗಿಸಿಕೊಳ್ಳುವಿಕೆ ಮತ್ತು ಕಡಲ ಸಂಪನ್ಮೂಲಗಳ ಸುಸ್ಥಿರ ಬಳಕೆ ಸೇರಿದಂತೆ ಪರಸ್ಪರರ ಹಿತಾಸಕ್ತಿಯ ಹಲವು ವಿಚಾರಗಳ ಕುರಿತು ಅವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಇದರಲ್ಲಿ ಶೋಧ ಮತ್ತು ರಕ್ಷಣಾ(ಎಸ್‌ಎಆರ್) ಕಾರ್ಯಾಚರಣೆ, ಮಾಲಿನ್ಯ ಪ್ರತಿಕ್ರಿಯೆ, ನೀಲಿ ಆರ್ಥಿಕತೆ ಮತ್ತು ಪೋರ್ಟ್ ಸ್ಟೇಟ್ ಕಂಟ್ರೋಲ್‌ನಲ್ಲಿ ಸಹಕಾರವೂ ಸೇರಿದೆ. ಈ ಎಲ್ಲ ವಲಯಗಳಲ್ಲೂ ತಮ್ಮ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆಯೂ ಅವರು ಚರ್ಚಿಸಿದರು. ಇಂಡೋ-ಪೆಸಿಫಿಕ್ ಸಾಗರ ಉಪಕ್ರಮ(ಐಪಿಒಐ)ದ ಕಡಲ ಪರಿಸರವಿಜ್ಞಾನದಲ್ಲಿ ಸಹಕಾರ ಸಾಧಿಸುವ ನಿಟ್ಟಿನಲ್ಲಿ ಇರುವ ಮಾರ್ಗಗಳ ಬಗ್ಗೆಯೂ ಅವರು ಚರ್ಚಿಸಿದರು.

3. ಮುಂದಿನ ಸುತ್ತಿನ ಮಾತುಕತೆಯನ್ನು ಉಭಯ ದೇಶಗಳಿಗೆ ಅನುಕೂಲಕರವಾದ ದಿನಾಂಕದಂದು ನವದೆಹಲಿಯಲ್ಲಿ ಮಾಡಲು ನಿರ್ಧರಿಸಲಾಯಿತು.

**ನವದೆಹಲಿ**

**ಆಗಸ್ಟ್ 13, 2024**